# ಅಪಾಯ

■ ನರಸಿಂಹಾರೆಡ್ಡಿ ಯಂಕಾಮೋಳ

ಕಲೆ: ಸಂತೋಷ್ ಸಸಿಹಿತ್ಲು



ಗುಡ್ಡದ ಮಡಿಲಲ್ಲಿ
ಪುಟ್ಟ ಗ್ರಾಮಗಳಿದ್ದವು
ಗುಡ್ಡದ ಮೇಲಿನ
ಕಾಡಿನ ನೆರಳಲ್ಲಿದ್ದವು

ಅಲ್ಲಿನ ಸಸ್ಯರಾಶಿ
ಎಲ್ಲರಿಗೆ ಬದುಕಾಗಿದ್ದವು
ಅಲ್ಲಿದ್ದ ವನಜೀವಿ
ಎಲ್ಲಾ ಆತ್ಮೀಯವಾಗಿದ್ದವು

ಈ ಕಾಡಿನ ನಾಡಿಗೆ
ಆಧುನೀಕರಣವು ಬಂತು
ಎಂದೂ ನೋಡದ
ಸೋಜಿಗವನ್ನು ತೋರಿಸಿತು

ಇನ್ನೂ ಮುಂದುವರೆದು
ಬಯಲು ಬೇಕೆಂದಿತು
ಈ ಕಾಡೆಂದಿದ್ದರೂ
ನಮಗೆ ಅಡ್ಡಗಾಲೆಂದಿತು

ಒಂದು ಕಡೆಯಿಂದ
ಕಾಡು ಕಡಿಯತೊಡಗಿದರು
ಕರಾಳ ಕಾದಿದೆಯೆಂದು
ಹಿರಿಯರು ಅಳತೊಡಗಿದರು

ಕಪ್ಪಾದ ಮೋಡವು
ಕೆಂಪು ಬಾನನ್ನು ನುಂಗಿತು
ಹನಿಹನಿ ಶುರುವಾಗಿ
ಮಳೆಯಾಗತೊಡಗಿತು

ಬೀಸುವ ಗಾಳಿಗೆ
ಮರವೆಲ್ಲಾ ಉರುಳಿತು
ಬೇರು ಸಡಿಲವಾಗಿ
ಹಿಡಿದ ಮಣ್ಣೆಲ್ಲಾ ಉದುರಿತು

ಎಲ್ಲಕಡೆಯಿಂದಲೂ
ಓಡೋಡಿ ಬಂದವು ನೀರು
ಕೊಚ್ಚಿ ಹೋದವು
ಇಳಿಜಾರಿನಲ್ಲಿರುವ ಊರು

## ಕುಂಚ ಪ್ರಪಂಚ





**ಈಶಾನ್ವಿ ರಾವ್**
2ನೇ ತರಗತಿ, ಕಾರ್ಮೆಲ್ ಸ್ಕೂಲ್, ಬೆಂಗಳೂರು



**ಅದ್ವೈತ್ ಎಂ.ಬಿ.**
ಎಲ್‌ಕೆಜಿ, ರೈಸ್ ಅಂಡ್ ಶೈನ್ ಸ್ಕೂಲ್, ಬೆಂಗಳೂರು





**ಹೃದ್ಯಾ ಎ. ಹಿರೇಮಠ್**
ಎಲ್‌ಕೆಜಿ, ಪೋಲ್ ಸ್ಟಾರ್ ಪ್ರೀಸ್ಕೂಲ್, ದಾವಣಗೆರೆ



ಎಳೆಯರು ಬಿಡಿಸಿದ ವರ್ಣಚಿತ್ರ, ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.
**ವಿಳಾಸ:** editorsu@sudha.co.in